ವರ್ಗಗಳ ಮಕ್ಕಳಿಗಾಗಿ ಹಾಗೂ ಶೇ. ೧೦ ಸೀಟುಗಳನ್ನು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗಾಗಿ ಮೀಸಲಿರಿಸಲಾಗುವುದು.

ಅ) ೧೯೯೫-೯೬ನೇ ಸಾಲಿನಿಂದ ಉದ್ದೇಶಿತ ಈ ಶಾಲೆಗಳನ್ನು ತೆರೆಯಲು ಯೋಜಿಸಲಾಗಿದ್ದು,ಹಾಲಿ ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿಯಿಂದ ನಡೆಯುತ್ತಿರುವ ವಿದ್ಯಾಪೀಠಗಳಲ್ಲಿ ಸ್ಥಳಾವಕಾಶ ವಿದ್ದಲ್ಲಿ ಅಲ್ಲಿಯೇ ಈ ಶಾಲೆಯನ್ನು ತೆರೆಯಲು ಅಥವಾ ಸ್ಥಳಾವಕಾಶ ಇಲ್ಲದಿದ್ದಲ್ಲಿ ಸೂಕ್ತ ನಿವೇಶನವನ್ನು ದೊರಕಿಸಿಕೊಂಡು ಪ್ರಸ್ತಾವನೆ ಸಲ್ಲಿಸುವಂತೆ ರಾಜ್ಯದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆಯಲಾಗಿದ್ದು, ಪ್ರಸ್ತಾವನೆಯನ್ನು ನಿರೀಕ್ಷಿಸಲಾಗುತ್ತದೆ.

ಮೇದ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ

೧೩೩ - ಶ್ರೀ ಬಸವರಾಜು ಹೆಚ್. ಡಿ. (ವೀರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೇದ ಜನಾಂಗದ ಪರ್ಯಾಯ ಜಾತಿಗಳಾದಂತಹ ಮೇಧಾರಿ, ಮೇಧಾರ, ಬುರುಡ, ಬುಡ್ಡರ ಮತ್ತು ಗೌರಿಗ ಈ ಜಾತಿಗಳನ್ನು ಕೇಂದ್ರ ಸರ್ಕಾರಕ್ಕೆ ೧೯೭೮ರಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಶಿಫಾರಸ್ಸು ಮಾಡಿದ್ದಾಗ್ಯೂಯು ಸಹ ಇದುವರೆವಿಗೂ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿರುವುದಿಲ್ಲವೆಂಬುದು ನಿಜವೆ.

ಆ) ಹಾಗಿದ್ದಲ್ಲಿ, ಮೇಲ್ಕಂಡ ಜಾತಿಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರದವರನ್ನು ಒತ್ತಾಯಿಸುವುದೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ದಿನಾಂಕ: 1.12.78 ರಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಮೇದಾರ (Medara) ಮೇದಾರಿ (Medari) ಗೌರಿಗ (Gauriga) ಮತ್ತು ಬುರುಡ (Burud) ಜನಾಂಗವನ್ನು ಮೇದಾ (Meda) ಜನಾಂಗದ ಪರ್ಯಾಯ ಪಂಗಡಗಳೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಯಿತು. ಆದರೆ 'ಬುಡ್ಡರ' ಜನಾಂಗವನ್ನು ಸೇರಿಸುವ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ.

ಆ) ರಾಜ್ಯ ಸರ್ಕಾರದ ಶಿಫಾರಸ್ಸನ್ನು ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಪುನಃ ಬರೆಯುವ ವಿಷಯವು ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು

134 - ಶ್ರೀ ಗೋವಿಂದ ಎಂ ಕಾರಜೋಳ (ಮುಧೋಳ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ, ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ೯೫-೯೬ನೇ ಸಾಲಿನಲ್ಲಿ ಬೆಳೆದ ಕಬ್ಬಿನ ಪ್ರಮಾಣವೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಸದ್ಯಕ್ಕಿರುವ ಸಕ್ಕರೆ ಕಾರ್ಖಾನೆಗಳೆಷ್ಟು, ಮತ್ತು ಅವು ಅರೆಯುವ ಸಾಮರ್ಥ್ಯವೆಷ್ಟು ?

ಇ) ಹೆಚ್ಚಿನ ಕಬ್ಬನ್ನು ಅರೆಯಲು ಸರ್ಕಾರದವರು ಮಾಡಿದ ವ್ಯವಸ್ಥೆಗಳೇನು ?

ಈ) ೧೯೯೪-೯೫ ರಲ್ಲಿ ಬೆಳೆದ ಹೆಚ್ಚಿನ ಕಬ್ಬನ್ನು ನೆರೆ ರಾಜ್ಯಗಳಿಗೆ ಸಾಗಿಸಲು ಮುಕ್ತ ಪರವಾನಗಿ ನೀಡಲು ಸರ್ಕಾರಕ್ಕೆ ಆದ ತೊಂದರೆಗಳೇನು ?

ಉ) ೧೯೯೪-೯೫ ರಲ್ಲಿ ಸಕ್ಕರೆ ಕಾರ್ಖಾನೆಯವರು ಕಬ್ಬನ್ನು ಖರೀದಿ ಮಾಡದೇ ರೈತರಿಗ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಊ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ,ಜವಳಿ, ವಿಜ್ಞಾನ ಮತ್ತ ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಸುಮಾರು ೨೬೩ ಲಕ್ಷ ಟನ್‌ಗಳು

(ವಿವರ ಅನುಬಂಧ-1 ರಲ್ಲಿ ನೀಡಲಾಗಿದೆ)

ಆ) ೩೦, ಒಟ್ಟು ದಿನವಹಿ ಅರೆಯುವ ಕಬ್ಬಿನ ಸಾಮರ್ಥ್ಯ ೭೧೯೫೦ ಟನಗಳಾಗಿರುತ್ತದೆ

ಇ) ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಭಾರತ ಸರ್ಕಾರದಿಂದ ೮ ಪರವಾನಿಗಿಗಳನ ಪಡೆಯಲಾಗಿದೆ. ಜೊತೆಗೆ ೧೭ ಅರ್ಜಿಗಳನ್ನು ಪರವಾನಿಗಿ ನೀಡಿಕೆಗಾಗಿ ರಾಜ್ಯ ಸರ್ಕಾರ ಶಿಫಾರಸ ಮಾಡಿದ್ದು, ಸದರಿ ಅರ್ಜಿಗಳು ಕೇಂದ್ರ ಸರ್ಕಾರದ ಮುಂದೆ ಇವೆ. ಇದಲ್ಲದೆ ೨೪ ಅರ್ಜಿಗಳು ಇತ್ತೀಚೆಗೆ ಬಂದಿದ್ದು, ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿರುತ್ತವೆ.

ಈ) ತಾಲ್ಲೂಕಿನ ತಹಶೀಲ್ದಾರರಿಗೆ ಅಧಿಕಾರವನ್ನು ಕತ್ತ ಮಾಡಿರುವುದರಿಂದ ಸರ್ಕಾರಕ ಯಾವುದೇ ತೊಂದರೆಯನ್ನು ಎದುರಿಸಿಲ್ಲ.

ಉ) ಹೌದು

ಊ) ೧) ಹೊರ ರಾಜ್ಯಗಳಿಗೆ ಹೆಚ್ಚಿನ ಕಬ್ಬನ್ನು ರಫ್ತು ಮಾಡುವುದು.

೨) ಸಹಕಾರ ನೀಡುವಂತೆ ಕಾರ್ಖಾನೆಗಳನ್ನು ಕೋರುವುದು.

೩) ಖಂಡಸಾರಿ ಘಟಕಗಳ ಪರವಾನಿಗಿಯ ಕಾಲಾವಧಿ ವಿಸ್ತರಿಸುವುದು.

೪) ಬಾಕಿ ಇರುವ ಪರವಾನಗಿಯನ್ನು ಮಂಜೂರು ಮಾಡಲು ಹಾಗೂ ಕಾರ್ಖಾನೆಗಳ ವಿಸ್ತರಣೆಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು.